NP – 018

25

**IV Semester B.Sc. Examination, August/September 2023**
**(NEP Scheme)**
**ಕನ್ನಡ**
VIGGANA **ವಿಜ್ಞಾನ ಕನ್ನಡ – 4** KANADA

Time : 2½ Hours Max. Marks : 60

I. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**ಇನ್ನೂರು** ಪದಗಳಿಗೆ ಮೀರದಂತೆ). **(2×10=20)**

1) ಅಸ್ಪೃಶ್ಯತೆಯು ಅಂಬೇಡ್ಕರ್ ಅವರ ಬದುಕನ್ನು ಹೇಗೆ ದಮನ ಮಾಡಿತು ?

2) ''ನೆಲವನ್ನು ಬಿಟ್ಟರೆ ಬದುಕೇ ಕೊನೆಯಾದಂತೆ'' ಈ ಹೇಳಿಕೆಯನ್ನು ಲೇಖನದ ಹಿನ್ನೆಲೆಯಲ್ಲಿ ಬರೆಯಿರಿ.

3) ಹಳ್ಳಿಯ ಹೆಣ್ಣು ಮಕ್ಕಳ ದಿಟ್ಟತನ 'ಬೇಗೂರಿನ ಚೆಲುವೆಯರ ಮದುವೆ ಕಥೆ'ಯಲ್ಲಿ ಹೇಗೆ ವ್ಯಕ್ತವಾಗಿದೆ ?

II. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**ನೂರು** ಪದಗಳಿಗೆ ಮೀರದಂತೆ). **(4×5=20)**

1) ದೇವಿಯ ತಂದೆ ಬದುಕಿನಲ್ಲಿ ಎದುರಿಸಿದ ಸಂಕಷ್ಟಗಳನ್ನು ಬರೆಯಿರಿ.

2) ಪಾರ್ಸಿ ಅತಿಥಿ ಮಂದಿರದಲ್ಲಿ ಮಾಲೀಕ ನಡೆದುಕೊಂಡ ರೀತಿಯನ್ನು ಕುರಿತು ಬರೆಯಿರಿ.

3) ಗಾಂಧೀಜಿ ಹಿತಕ್ಕಾಗಿ ದುಡಿದ ಕಸ್ತೂರ್ ಬಾ ಅವರ ವ್ಯಕ್ತಿತ್ವ ಪರಿಚಯಿಸಿ.

4) ಬಿಲ್ಕೀಸ್ ಬಾನುಳ ಜೀವನದ ಕನಸು ಕಮರಿ ಹೋದ ಬಗೆ ಹೇಗೆ ?

5) ಬೆವರು-ಬಸಿರು-ಬಂಡಾಯ ಕವಿತೆಯಲ್ಲಿನ ಸಾಹುಕಾರನ ಕ್ರೌರ್ಯವನ್ನು ಕುರಿತು ಬರೆಯಿರಿ.

6) ಸಂವಹನದ ಪ್ರಾಮುಖ್ಯತೆಯನ್ನು ಬರೆಯಿರಿ.

St Claret College
LIBRARY
Bangalore-560013

III. ಕೆಳಕಂಡ ಕಂಡಿಕೆಯನ್ನು **ಇಂಗ್ಲೀಷ್‌ಗೆ** ಭಾಷಾಂತರಿಸಿ : **(1×4=4)**

ಈ ಪಾರ್ಸಿ ಅತಿಥಿ ಗೃಹದಲ್ಲಿ ನಾನು ಕಳೆದ ಹನ್ನೊಂದನೇ ದಿನವದು. ಆಗತಾನೇ ನನ್ನ ಬೆಳಗಿನ ಉಪಹಾರವನ್ನು ಮುಗಿಸಿದ್ದೆ. ಉಡುಪನ್ನು ಧರಿಸಿ ಕಛೇರಿಗೆ ಹೊರಡುವ ಸಿದ್ಧತೆಯಲ್ಲಿದ್ದೆ. ಹಿಂದಿನ ದಿನ ಲೈಬ್ರರಿಯಿಂದ ತಂದಿದ್ದ ಪುಸ್ತಕಗಳನ್ನು ಹಿಂತಿರುಗಿಸಲು ಅವುಗಳನ್ನು ತೆಗೆದುಕೊಳ್ಳುತ್ತಿರುವಾಗಲೇ ಹಲವಾರು ಮಂದಿ ಮೆಟ್ಟಿಲೇರಿ ಬರುತ್ತಿರುವ ಹೆಜ್ಜೆಗಳ ಶಬ್ದ ಕೇಳತೊಡಗಿತು.

IV. ಯಾವುದಾದರೂ **ಒಂದು** ಔಷಧ ಕಂಪನಿಯಲ್ಲಿ ಮ್ಯಾನೇಜರ್ ಹುದ್ದೆಗಾಗಿ ಅರ್ಜಿ ಮತ್ತು ಅಭ್ಯರ್ಥನ ಪತ್ರ ಬರೆಯಿರಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ (**90** ಪದಗಳಿಗೆ ಮೀರದಂತೆ). **(1×4=4)**

ಅಜ್ಜಿ ಮಣ್ಣಿನ ಮಡಿಕೆಯಲ್ಲಿ ಅಡುಗೆ ಮಾಡುತ್ತಿರುವ ಸನ್ನಿವೇಶ.

P.T.O.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ ಸೂಕ್ತ ಶೀರ್ಷಿಕೆ ನೀಡಿ. **(1×4=4)**

'ರಿಮ್ಯಾಂಡ್ ಹೋಂ' ನ ಬಾಲಾಪರಾಧಿ ವಿಭಾಗದಲ್ಲಿ ಬಂಧಿಯಾಗಿರುವ ಹನ್ನೊಂದು ಅಥವಾ ಹನ್ನೆರಡು ವರುಷದ ಹುಡುಗಿ ದೇವಿಯನ್ನು ಕಂಡು ಮಾತಾಡಿಸುವ ಅವಕಾಶ ಕಳೆದವಾರ ಅಕಸ್ಮಾತ್ತಾಗಿ ನನಗೆ ಲಭ್ಯವಾಯಿತು. ಅವಳೊಬ್ಬ ಕೊಲೆಗಾರ್ತಿ ಎಂಬುದು ತಿಳಿದಾಗ ನಾನು ಬೆಚ್ಚಿದ್ದೆ. ದೇವಿ ತನ್ನೆಲ್ಲಾ ಕಥೆಯನ್ನು ಖುದ್ದಾಗಿ ಹೇಳಿಕೊಂಡ ನಂತರ ಆ ಕಟುಸತ್ಯವನ್ನು ನಾನು ಒಪ್ಪಲೇ ಬೇಕಾಯಿತು. ಆ ಕ್ಷಣದಿಂದ ನನ್ನ ಮನದಲ್ಲಿ ಬೇರುಬಿಟ್ಟಿದ್ದ ಕೊಲೆಯಾಗುವಿಕೆ ಮತ್ತು ಕೊಲೆ ಮಾಡುವಿಕೆ ಈ ಎರಡನ್ನು ಕುರಿತು ಮೂಲಭೂತ ಅನುಕಂಪ ಹಾಗೂ ದೋಷಗಳು ತಮ್ಮ ಅರ್ಥವನ್ನು ಸಂಪೂರ್ಣವಾಗಿ ಕಳೆದುಕೊಂಡಿವೆ.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. **(4×1=4)**

1) 'ಮುತಾಹ್' ಪದ್ಧತಿ ಮೊದಲು ಇದ್ದುದು

ಅ) ಅಮೇರಿಕಾ ಆ) ಅರಬ್ ಇ) ಪಾಕಿಸ್ತಾನ ಈ) ಭಾರತ

2) ಅಂಬೇಡ್ಕರ್ ಜನಿಸಿದ ಸ್ಥಳ

ಅ) ಮಹುವಾ ಆ) ಮಧ್ಯಪ್ರದೇಶ ಇ) ಕೊಲ್ಕತ್ತ ಈ) ಬರೋಡ

3) ಅಮೇರಿಕಾದಿಂದ ಭಾರತಕ್ಕೆ ಮರಳಿ ಬಂದ ವೈದ್ಯ.

ಅ) ಅಜೀಂ ಪ್ರೇಂಜಿ ಆ) ವಿಜಯ್ ಕುಮಾರ್

ಇ) ಅಜಯ್ ಕುಮಾರ್ ಈ) ನಾರಾಯಣ ಮೂರ್ತಿ

4) ''ಗ್ಲಿಂಪ್ಸನ್ ಆಫ್ ವರ್ಲ್ಡ್ ಹಿಸ್ಟರಿ'' ಎಂಬ ಪ್ರಬಂಧ ಬರೆದವರು

ಅ) ಗಾಂಧೀಜಿ ಆ) ಡಾ. ಚನ್ನೇಶ್

ಇ) ಡ್ಯಕೊಚೇವ್ ಈ) ಜವಾಹರ್‌ಲಾಲ್ ನೆಹರು

---